**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಗರಿಬೊಮ್ಮನಹಳ್ಳಿ.**

**ಸಿ.ಸಿ.ಸಂಖ್ಯೆ 116/2021**

ಪಿರ್ಯಾದುದಾರರು : ರಾಜ್ಯದ ಪರವಾಗಿ ಇಟ್ಟಿಗಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1) ಊರಮುಂದಲ ಬೆಟ್ಟಪ್ಪ ಬಿನ್ ರಾಮ ಚಂದ್ರಪ್ಪ ,
ವಯಸುಃ 54 ವರ್ಷ, ಉದ್ಯೋಗಃ ವ್ಯವಸಾಯ,
2) ಪಂಪಣ್ಣ ಬಿನ್ ರಾಮ ಚಂದ್ರಪ್ಪ ,
ವಯಸುಃ 56 ವರ್ಷ, ಉದ್ಯೋಗಃ ವ್ಯವಸಾಯ,
4) ಮಂಜುನಾಥ ಬಿನ್ ಬೆಟ್ಟಪ್ಪ ,
ವಯಸುಃ 30 ವರ್ಷ, ಉದ್ಯೋಗಃ ವ್ಯವಸಾಯ ,
5) ಶಿವಕುಮಾರ ಬಿನ್ ಬಸಪ್ಪ ,
ವಯಸುಃ 28 ವರ್ಷ, ಉದ್ಯೋಗಃ ವ್ಯವಸಾಯ,
6) ಗಿರೀಶ ಬಿನ್ ಪಂಪಣ್ಣ ,
ವಯಸುಃ 28 ವರ್ಷ, ಉದ್ಯೋಗಃ ವ್ಯವಸಾಯ,
8) ಭರ್ಮಜ್ಜ ಬಿನ್ ಚಂದ್ರಪ್ಪ ,
ವಯಸುಃ 24 ವರ್ಷ, ಉದ್ಯೋಗಃ ವ್ಯವಸಾಯ,
9) ಅಂಬಳಿ ನಾಗೇಂದ್ರ ಬಿನ್ ಭರ್ಮಪ್ಪ ,
ವಯಸುಃ 48 ವರ್ಷ, ಉದ್ಯೋಗಃ ವ್ಯವಸಾಯ,
10) ದೇವರಾಜ ಬಿನ್ ನಾಗೇಂದ್ರ ,
ವಯಸುಃ 25 ವರ್ಷ, ಉದ್ಯೋಗಃ ವ್ಯವಸಾಯ,
ಎಲ್ಲಾರು ವಾಸಃ ಅಲಬೂರು ಗ್ರಾಮ ,
ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಭಾಗ್ಯಲಕ್ಷ್ಮಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ಮತ್ತು 2, 4 ರಿಂದ 8 ಮತ್ತು 9 ಮತ್ತು 10 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 01-07-2020 ರಂದು ಸಂಜೆ 4-30 ಗಂಟೆಗೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಇಟ್ಟಿಗಿ ಪೊಲೀಸ್ ಠಾಣಾ ಸರಹದ್ದಿನ ಅಲಬೂರು ಗ್ರಾಮದಲ್ಲಿ ಚಾಸಾ-1 ರವರ ಹೊಲ ಮತ್ತು ಆರೋಪಿತರಾದ ನಿಮ್ಮ ಹೊಲಗಳ ಮಧ್ಯ ಇರುವ ಸರ್ಕಾರಿ ಜಮೀನನ್ನು ಚಾಸಾ-7 ರವರು ಸಾಗುವಳಿ ಮಾಡಿಕೊಂಡು ಬರುತ್ತಿದ್ದು, ಸದರಿ ಜಮೀನಿನಲ್ಲಿ ಚಾಸಾ-7 ರವರಿಗೆ ಗೊತ್ತಿಲ್ಲದಂತೆ ಆರೋಪಿತರಾದ ನೀವು ನೀರು ಹರಿಯಲು ಕಾಲುವೆಯನ್ನು ತಗೆದಿದ್ದು, ಸದರಿ ಕಾಲುವೆಯನ್ನು

ಚಾಸಾ-7 ರವರು ಮುಚ್ಚಲು ಹೋದಾಗ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ -1 ರವರ ಜೊತೆ ವಿನಾಕಾರಣ ದೊಂಬಿಯನ್ನುಂಟು ಮಾಡಿ, ಜಗಳ ತೆಗೆದಿದ್ದು, ಆದ್ದರಿಂದ 1 ರಿಂದ 6 ಮತ್ತು 8 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.143, 147 ಮತ್ತು 148 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಚಾಸಾ-1 ರವರಿಗೆ ಅವಾಚ್ಯಶಬ್ಧಗಳಿಂದ ಬೈದು ಉದ್ದೇಶಪೂರ್ವಕವಾಗಿ ಅವರಿಗೆ ಅವಮಾನ ಮಾಡಿ ಶಾಂತಿಭಂಗವುಂಟು ಮಾಡಿದ್ದು, ಆದ್ದರಿಂದ 1 ರಿಂದ 6 ಮತ್ತು 8 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ 1 ನೇ ಆರೋಪಿಯಾದ ನೀವು ಸ್ವ-ಇಚ್ಚೆಯಿಂದ ಚಾಸಾ-4 ರವರ ಕುತ್ತಿಗೆಯ ಮೇಲೆ ಕಾಲು ಇಟ್ಟು ಎಡ ಕೈಗೆ ಬಾಯಿಯಿಂದ ಕಚ್ಚಿ ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಈ ಮೂಲಕ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಸ್ವ-ಇಚ್ಚೆಯಿಂದ ಕಟ್ಟಿಗೆಯನ್ನು ಮಾರಕ ಆಯುಧದಂತೆ ಬಳಸಿ ಅದರಿಂದ ಚಾಸಾ-1 ಮತ್ತು ಚಾಸಾ-5 ರವರಿಗೆ ಹೊಡೆದು ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ 1 ರಿಂದ 6 ಮತ್ತು 8 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಐದನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಹೋಗಿ ಇನ್ನೊಮ್ಮೆ ಈ ಹೊಲಕ್ಕೆ ಕಾಲು ಇಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ್ದರಿಂದ, 1 ರಿಂದ 6 ಮತ್ತು 8 ರಿಂದ 10 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 6 ಮತ್ತು 8 ರಿದ 10 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 2 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 2 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 3 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 3 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 4 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 4 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 5 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 5 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 6 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 6 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 8 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 8 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 9 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 9 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 10 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿಯಾದ ನಿಮಗೆ ಓದಿ

ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 10 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ದಿನಾಂಕ : 18-02-2022

ಹಗರಿಬೊಮ್ಮನಹಳ್ಳಿ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.
ನ್ಯಾಯಾಲಯ ಹಗರಿಬೊಮ್ಮನಹಳ್ಳಿ

1 ನೇ ಆರೋಪಿ ಸಹಿ : 2 ನೇ ಆರೋಪಿ ಸಹಿ :

4 ನೇ ಆರೋಪಿ ಸಹಿ : 5 ನೇ ಆರೋಪಿ ಸಹಿ :

6 ನೇ ಆರೋಪಿ ಸಹಿ : 8 ನೇ ಆರೋಪಿ ಸಹಿ :

9 ನೇ ಆರೋಪಿ ಸಹಿ : 10 ನೇ ಆರೋಪಿ ಸಹಿ :